**ಕವಿತೆ**




## ರಂಗನಾಥ ಕಂಟನಕುಂಟೆ

ಕಲೆ: ಕೌಶಿಕ್




# ಸಂತೆಯಲಿ ಕಳೆದ ಗುರುತು

ಪಿಸುನುಡಿದೆ ಕಣ್ಣಲ್ಲಿ ಕಣ್ಣಿಟ್ಟು
ಅವಳೂ ನುಡಿದಳು
ನನ್ನೆದೆಯ ಮೇಲೆ ತಲೆಯಿಟ್ಟು

ನಾನು ಅವಳಿಗೆ ಆಗಲಿಲ್ಲ ತೊಡಕು
ಅವಳು ಆಗಲಿಲ್ಲ ನನಗೆ ಕೆಡಕು
ನನ್ನೊಲವು ಅವಳಿಗೆ
ಅವಳೊಲವು ನನಗೆ
ಕೂಡಿ ಬಂದವು
ಯೋಗಾಯೋಗದ ಹಾಗೆ

ಕಳ್ಳುಬಳ್ಳಿಗಳ ಚಪ್ಪರದಲಿ
ಮೊಳಗಿತ್ತು ಒಲವಿನ ರಾಗ
ಹಬ್ಬಿತ್ತು ಪ್ರೇಮ ಪರಾಗ

ಗಿಳಿಗುಬ್ಬಿಗಳ ಹಾಗೆ
ಪುಟ್ಟಗೂಡು ಕಟ್ಟಿ
ಒಲವಿನ ಮೊಟ್ಟೆಯಿಟ್ಟು
ಉಗುರು ಬೆಚ್ಚಗಿನ ಹವೆಯಲಿ
ಜೀವನಚಕ್ರ ತಳ್ಳುತ್ತಿದ್ದೆವು
ಒಲವಿನ ತೇರು ಎಳೆಯುತ್ತಿದ್ದೆವು

ಪ್ರೇಮದ ತಂಪೊತ್ತಿನಲಿ
ಪ್ರಾಯದ ಉಲ್ಲಾಸದಲಿ
ಸುಮ್ಮನೆ ಅಡ್ಡಾಡಿ ಬರಲು
ಸಂತೆಯೊಳಗೆ ಇಟ್ಟ ಪುಟ್ಟ ಹೆಜ್ಜೆ
ಅವಳ ಕೈಹಿಡಿದು ಎಳೆದಿತ್ತು
ಅಪರಿಮಿತ ಬಯಕೆಗಳ ಪಾಚಿಯ ಮೇಲೆ ಕೆಡವಿತ್ತು

ಅವಳಿಗೆ ತಾನು ಪಾದವೂರಿದ್ದ ನೆಲ ಮರೆತಿತ್ತು
ಜಗಮಗಿಸುವ ಬಲ್ಬುಗಳ ಬೆಳಕಿನಲಿ
ಕೈಹಿಡಿದು ಹೆಜ್ಜೆ ಹಾಕಿದ್ದ
ನನ್ನ ತಲೆಬುರುಡೆ
ಸಿಡಿದಿತ್ತು; ತಬ್ಬಿದ ಕೈ ಸಡಿಲಾಗಿತ್ತು
ಸೊಂಟದಲಿ ಪುಲಕದ ಕಂಪನ ಬಂದಾಗಿತ್ತು

ಅವಳು
ಗಾವುದ ಗಾವುದ ಗಾವುದ ಮುಂದೆ
ಸಾಗಿ ಆಗಿತ್ತು
ಬಯಕೆ ದೋಣಿಯಲಿ ದೂರ
ತೇಲಿ ಆಗಿತ್ತು
ಕೊಂಡಿ ಕಳಚಿ ಬಂಡಿ ಹಳಿ ತಪ್ಪಿ ಆಗಿತ್ತು

ಗುಬ್ಬಿ ಗೂಡಲಿ ಮೌನ
ಮನೆ ಮಾಡಿತ್ತು
ಸಂತೆ ಗದ್ದಲದಲಿ
ಯಾರಿಗೂ ಕೇಳದಾಗಿತ್ತು!
ಕಳ್ಳುಬಳ್ಳಿಗಳ ಚಿಲಿಪಿಲಿ ಕೇಳದಾಗಿತ್ತು!

ಸಂತೆ ಮಾತಿನ ಗದ್ದಲದಡಿ
ಮೌನ ಜಜ್ಜಿ ಹೋಗಿತ್ತು;
ಈಗ
ಅವಳ ನಡಿಗೆಯ ಹೆಜ್ಜೆ ಗುರುತೂ
ಕಾಣದಾಗಿತ್ತು; ಸಂತೆಯಲಿ ಗುರುತು
ಕಾಣದಾಗಿತ್ತು...